ಪುರುಷೋತ್ತಮ, ಎಲ್ಲರಿಗೂ ಎರಡೆರಡು ಚಪಾತಿ ಮತ್ತು ಮೂವರಿಗೂ ಸೇರಿಸಿ ಒಂದೇ ಸಬ್ಜಿ ಹೇಳಿದ. ಅದು ಹಸಿದ ಯುವಕರ ಬಕಾಸುರ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆಯಂತಾಗಿತ್ತು. ದಿನೇಶ್ ಪ್ರತಿ ಬಾರಿಯಂತೆ, ಪುಕ್ಕಟೆ ನೀಡುತ್ತಿದ್ದ ಉಪ್ಪಿನಕಾಯಿ, ನಿಂಬು ಮತ್ತು ಈರುಳ್ಳಿಯನ್ನು ಮತ್ತಷ್ಟು ಇನ್ನಷ್ಟು ಕೇಳಿ ತರಿಸಿಕೊಂಡ. ಇನ್ನೇನು ತಿನ್ನಲು ಆರಂಭಿಸಿದ್ದರು, ಡಾಬಾದ ಮಾಲೀಕ ಇವರ ಬಳಿಗೆ ಬಂದ. ಬಹುಶಃ ಆತ ಸೈಕಲ್‌ಗೆ ಅಂಟಿಸಿದ್ದ ಆ ಚಿಕ್ಕ ಫಲಕವನ್ನು ಓದಿದ್ದ. ಅವರ ಪ್ರವಾಸದ ಬಗ್ಗೆ ಕುತೂಹಲದಿಂದ ಕೇಳಿದ. ಅವರ ದೀರ್ಘ ಪ್ರವಾಸದ ವಿವರಗಳನ್ನು ಕೇಳಿ ಆತ ಸಾಕಷ್ಟು ಪ್ರಭಾವಿತನಾದ. ತಕ್ಷಣ ರೊಟ್ಟಿ ಬಡಿಸುತ್ತಿದ್ದವನಿಗೆ ಹೇಳಿದ: 'ಇವರು ಎಷ್ಟು ತಿನ್ನುತ್ತಾರೋ ಅಷ್ಟು ಬಡಿಸು. ಬಿಲ್ ಮಾಡಬೇಡ'. ಇದನ್ನು ಕೇಳಿದಾಗ ಭಾವೇಶ್‌ಗೂ ದಿನೇಶ್‌ಗೂ ಆದ ಆನಂದ ಹೇಳತೀರದು.

ಅವರ ಹೊಟ್ಟೆಯಲ್ಲಿ ಭಯಂಕರ ಹಸಿವೆಯಿತ್ತು. ಭಾವೇಶ್ ಒಬ್ಬರೇ 25ಕ್ಕೂ ಹೆಚ್ಚು ತಂದೂರಿ ರೊಟ್ಟಿ ತಿಂದು ಹಾಕಿದರು. ಅಲ್ಲಿ ರೊಟ್ಟಿ ಮಾಡುವವನಿಂದ ಹಿಡಿದು ಬಡಿಸುವವನೂ, ಸುತ್ತಲೂ ಕುಳಿತ ಗ್ರಾಹಕರೂ, 'ಅರೆ, ಇದೇನು ನಡೆಯುತ್ತಿದೆ' ಎಂಬಂತೆ ಕೌತುಕದಿಂದ ನೋಡತೊಡಗಿದರು. ದಿನೇಶ ಪಿಸು ನುಡಿದು ಹೇಳಿದರೂ, ಗೆಳೆಯರ ಗಮನ ಅತ್ತ ಹರಿಯಲಿಲ್ಲ. ಪೂರ್ಣ ಗಮನ ತಟ್ಟೆಗೆ ಬೀಳುತ್ತಿದ್ದ ರೊಟ್ಟಿಯ ಮೇಲೆ. ಬಿಸಿ ಬಿಸಿ ರೊಟ್ಟಿ ಬರುತ್ತಿವೆ, ಇವರು ಮುಗಿ ಬಿದ್ದು ತಿಂದು ಮುಗಿಸುತ್ತಿದ್ದಾರೆ. ಇಷ್ಟೊಂದು ರೊಟ್ಟಿ ಹೇಗೆ ತಿಂದು ಮುಗಿಸಿದೆವು ಎಂಬ ಪರಿವೆಯೇ ಅವರಿಗಿರಲಿಲ್ಲ. ಅವರ ಹಸಿವು ಬಾಯ್ಬಿಟ್ಟು ತಳ ಕಾಣದ ಬಾವಿಯಾಗಿತ್ತು. ವಯಸ್ಸಿಗೆ ಬಂದ ಹುಡುಗರು, ಶ್ರಮದ ಸೈಕಲ್ ತುಳಿತ, ಪುರುಷೋತ್ತಮನ ಜಿಪುಣತನ ಎಲ್ಲಾ ಸೇರಿ ಆ ಮಾಲೀಕನ ಕೃಪೆಯಿಂದ ಪುಕ್ಕಟೆ ಸಿಕ್ಕ ರೊಟ್ಟಿಗಳನ್ನು ಸಂಕೋಚವಿಲ್ಲದೆ ಸಿಕ್ಕದ್ದೇ ಸಾಕು ಎಂಬಂತೆ ಗಬಗಬನೆ ತಿಂದು ಮುಗಿಸಿದ್ದರು.

ಇಂತಹ ಊಟ ಸದಾ ಸಿಗುತ್ತಿರಲಿಲ್ಲ. ಆ ಇಡೀ ಸೈಕಲ್ ಯಾತ್ರೆಯಲ್ಲಿ ಭಾವೇಶ್ 18 ಕೆ.ಜಿ. ತೂಕ ಕಳೆದುಕೊಂಡಿದ್ದರು! ಆ ರಾತ್ರಿಯ ಭೋಜನವನ್ನು ಇವತ್ತಿಗೂ ನೆನೆದಾಗ, ತಾನು ಅಷ್ಟೊಂದು ರೊಟ್ಟಿ ತಿಂದದ್ದು ಹೇಗೆ ಎಂದು ಭಾವೇಶ್ ಅವರಿಗೆ ಅಚ್ಚರಿಯಾಗುತ್ತದೆ.

ಅಧ್ಯಾಯ–5

## ಕಲ್ಲಾಗು ಕಷ್ಟಗಳ ಮಳೆ ಸುರಿಯೆ

ಬಾಲಾಘಾಟ್‌ನಿಂದ ಗೋಂದಿಯಾಗೆ ಕೇವಲ 45 ಕಿ.ಮೀ. ದೂರ. ಕಡೆಗೂ ಆ ದಿನ ಬಂದಿತ್ತು. ಅವರ ಸೈಕಲ್ ಯಾತ್ರೆಯ ಕಡೆಯ ದಿನ. ಸುಮಾರು 45 ದಿನಗಳು ತಮ್ಮ ಗೋಂದಿಯಾ ಗ್ರಾಮದಿಂದ ದೂರವಾಗಿ ಯಾತ್ರೆ ಹೋದವರು, ಈಗ ತಮ್ಮ ಊರಿನಿಂದ ಕೆಲವೇ ಗಂಟೆಗಳ ದೂರದಲ್ಲಿದ್ದರು. ಯಾವಾಗ ಊರು ತಲುಪುತ್ತೇವೋ ಎಂಬ ತವಕ. ಅಬ್ಬಾ, ಇನ್ನು ಸಾಕಾಯಿತು, ಊರು ತಲುಪಿದರೆ ಸಾಕು ಎಂಬ ಕಡೆ ಘಳಿಗೆಯ ಭಾವ. ಸೈಕಲ್‌ಗೆ ರೆಕ್ಕೆಗಳಿದ್ದರೆ ಆ ಕ್ಷಣವೇ ಹಾರಿ ಹೋಗಿ ಮನೆ ತಲುಪುವ ಆತುರ ಮೂವರಲ್ಲೂ ತುಂಬಿತ್ತು. ಅಷ್ಟು ಎಳೆಯ ವಯಸ್ಸಿಗೆ ಮನೆಯಿಂದ ದೂರವಾಗಿ 45 ದಿನವಿದ್ದರು. ಆದರೆ ಬಾಲಾಘಾಟ್‌ನ ಮಿತ್ರರೆಲ್ಲರೂ, 'ಈ ಒಂದು ದಿನ ಮತ್ತು ರಾತ್ರಿ ನೀವಿಲ್ಲೇ ತಂಗಬೇಕು' ಎಂದು ಆಗ್ರಹ ಮಾಡಿದರು. ಅದಾಗಲೇ ಗೋಂದಿಯಾದಲ್ಲಿ ಅವರ ಸ್ವಾಗತಕ್ಕೆ ಭಾರೀ ತಯಾರಿ ಸಿದ್ಧವಾಗಿತ್ತು. ಅದೇ ರಾತ್ರಿ ಸುಮಾರು ಹತ್ತು ಗಂಟೆಯ ಹೊತ್ತಿಗೆ 50–60 ಮಂದಿ ಸ್ನೇಹಿತರು–ಸಂಬಂಧಿಕರು ಗೋಂದಿಯಾದಿಂದ ಬಾಲಾಘಾಟ್‌ಗೆ ಬಂದು ಇಳಿದರು. ಯಾವ ಹೋಟೆಲಿನಲ್ಲಿ ಅವರು ಇಳಿದುಕೊಂಡಿದ್ದರೋ ಆ ಹೋಟೆಲ್ ಪೂರಾ ಗೋಂದಿಯಾದ ಜನರಿಂದ ತುಂಬಿಹೋಯಿತು. ಆ ಕ್ಷಣಕ್ಕೆ ಭಾವೇಶ್‌ಗೂ ಆತನ ಗೆಳೆಯರಿಗೂ ತಮ್ಮ ಪಯಣದ ಆಯಾಸವೆಲ್ಲ ಹಾರಿಹೋಗಿತ್ತು. ಎಂತಹ ಸಂಭ್ರಮದ ವಾತಾವರಣ. ಯಾರ ಯಾರ ಜೊತೆ ಕೈಕುಲುಕಿದ್ದು, ಯಾರನ್ನು ಅಪ್ಪಿದ್ದು, ಯಾರಾರೊಡನೆ ಮಾತನಾಡಿದ್ದು – ಎಲ್ಲವೂ ಕಲಸು ಮೇಲೋಗರ. ಪ್ರವಾಸದ ಬಗ್ಗೆ ಹೇಳಿದಷ್ಟೂ ಮುಗಿಯುತ್ತಿಲ್ಲ. ಆ ಇಡೀ ರಾತ್ರಿ ಯಾರೂ ಮಲಗಿರಲಿಲ್ಲ. ಇದೇ ಜನ 45 ದಿನಗಳ ಹಿಂದೆ ಅವರ ಯಾತ್ರೆಗೆ ಶುಭಕೋರಿ ಕಳುಹಿಸಿದ್ದರು. ಅಷ್ಟು ಜನರ ಪ್ರೀತಿ, ಅವರನ್ನು ಅಪ್ಪಿ ಹಿಡಿದ ರೀತಿಗೆ ಭಾವೇಶ್ ಅವರ ಕಣ್ಣುಗಳಲ್ಲಿ ಕಂಬನಿ ಮೂಡಿತ್ತು. ಆ ಒಂದೊಂದು ಕಂಬನಿಯ ಹನಿಯಲ್ಲೂ ಅವರ ಸಾಹಸ, ಸಾರ್ಥಕತೆ, ದೃಢ ಸಂಕಲ್ಪ ಮತ್ತು ಆತ್ಮವಿಶ್ವಾಸ ಜಿನುಗುತ್ತಿತ್ತು.

ದಿನಾಂಕ 30 ನವೆಂಬರ್ 1988, ಬೆಳಗಿನ ಒಂಬತ್ತು ಗಂಟೆ. ಬಾಲಾಘಾಟ್‌ಗೆ ಬಂದವರೆಲ್ಲ ತಮ್ಮ ಮೋಟರ್ ಸೈಕಲ್ ಮತ್ತು ಗಾಡಿಗಳಲ್ಲಿ ಭಾರೀ ಮೆರವಣಿಗೆ ಹೊರಟರು. ಅವರ ನಡುವೆ ಈ ಮೂವರು ಹುಡುಗರು ಸೈಕಲ್‌ನಲ್ಲಿ ಸಾಗಿದ್ದರು. ಈ ಭಾರೀ ಗುಂಪು ಸಂಭ್ರಮದಿಂದ ಗೋಂದಿಯಾ ಕಡೆಗೆ ಹೊರಟಿತು. ಅಲ್ಲಿ ನೋಡಿದರೆ, ಸುಮಾರು 400–500 ಜನ ಗೋಂದಿಯಾದಿಂದ ಹತ್ತು ಕಿ.ಮೀ. ದೂರದಲ್ಲಿಯೇ ಆ ಮೆರವಣಿಗೆಯನ್ನು ಎದುರುಗೊಂಡು ಜೊತೆಯಾದರು. ಅವರಲ್ಲಿ ಮಧುರ್ ಭಾಯಿ, ಪ್ರಕಾಶ್ ಜಸಾನೀಜೀ, ಚೇತನ್ ಭಾಯಿ ಪಟೇಲ್ ಅವರೆಲ್ಲರೂ ಇದ್ದರು. ಬೃಹತ್ ಮೆರವಣಿಗೆ ಮಧ್ಯಾಹ್ನದ ಹೊತ್ತಿಗೆ ಕಾಲೇಜು ತಲುಪಿತು. ಅದೇ ಊರಿನ ಬೀದಿಗಳಲ್ಲಿ ಆ ಮೂವರು ಎಳೆಯರು ಅದೆಷ್ಟು ಅಲೆಯುತ್ತಿದ್ದರು. ಅವರ ಹೆಸರು, ಪರಿಚಯ ಎಷ್ಟು ಜನರಿಗಿತ್ತು? ಆದರೆ ಇಂದು ಅದೇ ಹುಡುಗರು ಆ ಊರಿನ ಸುಪ್ರಸಿದ್ಧ ಸಾಹಸಿಗಳಾಗಿದ್ದರು.

ಹಾದಿಯಲ್ಲಿ ಮೆರವಣಿಗೆ ಹೊರಟಂತೆ ಅಗಲು ಬಗಲಿನ ಅಂಗಡಿ ಮನೆಗಳ ತಾರಸಿಯ ಮೇಲೆ ನಿಂತ ಜನ, ಅವರ ಮೇಲೆ ಹೂವಿನ ಮಳೆಗರೆದರು. ಅವರೆಲ್ಲರ ಅಭಿನಂದನೆ ಭಾವೇಶ್ ಅವರ ಕಿವಿಗಳಲ್ಲಿ ಮೊರೆಯುತ್ತಿತ್ತು. ಸ್ವರ ಬಂದ ಕಡೆಗೆಲ್ಲ ತಿರುಗಿ ಧನ್ಯವಾದ ಹೇಳುತ್ತಾ ನಡೆದರು. ಅವರ ಸಾಹಸಪೂರ್ಣ ಯಾತ್ರೆಯ ಸಫಲ ಮುಕ್ತಾಯದ ಖುಷಿಯಲ್ಲಿ ಗೋಂದಿಯಾ ಉತ್ಸಾಹದಿಂದ ನಲಿದಿತ್ತು. ಕೊನೆಗೆ ಕಾಲೇಜಿನ ಆವರಣವನ್ನು ತಲುಪಿದರು. ಕಾಲೇಜಿನ ಗಂಟೆ ಬಲು ದೀರ್ಘವಾಗಿ ಬಾರಿಸಿತು. ಇಡೀ ಕಾಲೇಜು ಅವರನ್ನು ಭೆಟ್ಟಿಯಾಗಲು ಬಂದು ಸೇರಿತ್ತು. ಅವರ ಖುಷಿಗೆ ಪಾರವಿರಲಿಲ್ಲ. ಯಾರು ಯಾರು ಬಂದು ಆಲಂಗಿಸಿದರು ಎನ್ನುವುದು ಎಣಿಕೆ ತಪ್ಪಿತ್ತು. ಎಲ್ಲರ ಕೈಯಲ್ಲಿ ಹೂವಿನ ಹಾರ. ಅವರ ಕೊರಳು ತುಂಬಿತ್ತು. ಏಕಾಏಕಿ ಗ್ರಾಮದ ಅಸಾಮಾನ್ಯ ವೀರರಾಗಿದ್ದರು, ದೇಸಿ ಸೆಲೆಬ್ರಿಟಿಗಳು! ಮುಂದೆ ಅವರ ಸೈಕಲ್ ಯಾತ್ರೆ 'ಲಿಮ್ಕಾ ಬುಕ್ ಆಫ್ ರೆಕಾರ್ಡ್' ಅಲ್ಲದೆ, ಅನೇಕ ದಾಖಲೆಗಳ ಪುಸ್ತಕದಲ್ಲಿ ಸೇರಲಿತ್ತು. ಸೈಕಲ್ ಯಾತ್ರೆ ಆ ಮೂವರು ಹುಡುಗರನ್ನು ಅದರಲ್ಲೂ ಭಾವೇಶ್ ಅವರನ್ನು ಖ್ಯಾತರನ್ನಾಗಿಸಿತ್ತು. ಈಗ ಕಂಡ ಕಂಡವರೆಲ್ಲ ಅವರ ಮಿತ್ರರಾಗಲು ಬಯಸುತ್ತಿದ್ದರು.

ಬಾಲ್ಯದಲ್ಲಿ ಅಮ್ಮ ಹೇಳಿದ ಮಾತು ನೆನಪಾಯಿತು: 'ಇತರರ ಅಪಹಾಸ್ಯವನ್ನು ಮನಸ್ಸಿಗೆ ತೆಗೆದುಕೊಳ್ಳಬೇಡ. ಜಗತ್ತಿನಿಂದ ಮುಖ ಮುಚ್ಚಿ ಓಡಬೇಡ. ಮನೆಯಲ್ಲಿ ಮುನಿದು ಕೂರಬೇಡ. ಇಂತಹುದೇನಾದರೂ ಮಾಡು, ಇಡೀ ಜಗತ್ತೇ ನಿನ್ನೆಡೆಗೆ ಅಭಿಮಾನದಿಂದ ನೋಡುವಂತೆ.' ಭಾವೇಶ್‌ಗೆ ಅಮ್ಮನ ಮಾತಿನ ಮರ್ಮ ಅರಿವಾಗಿತ್ತು. ನಗುವ ಜನರು ಇಂದು ಅವರ ಕೈಕುಲುಕಿ ಪುಷ್ಪವೃಷ್ಟಿಗರೆದಿದ್ದರು. ಬದುಕು ಇಷ್ಟೇ ಅಲ್ಲವೆ, ಸೋತು ನೆಲ ಕಚ್ಚಿ ಕುಳಿತರೆ, ನಾನೊಬ್ಬನೇ ಏಕಾಂಗಿಯಾಗಿ ಅಳಬೇಕು. ಅಡೆತಡೆಗಳ ಗೆದ್ದು ಸಾಹಸದಲ್ಲಿ ನಿಂತಾಗ, ಇಡೀ ಜಗತ್ತೇ ತಮ್ಮ ಜೊತೆ ನಿಲ್ಲುತ್ತದೆ. ಸವಾಲಿನ ಕೊಂಬು ಹಿಡಿದು ಎದುರಿಸಿದಾಗ, ಎದೆ ತುಂಬುವ ಆತ್ಮವಿಶ್ವಾಸಕ್ಕೆ ಸಾಟಿಯಿಲ್ಲ. ಆ ಹೊತ್ತು ತಮ್ಮ ಬಗ್ಗೆ ತಮಗೇ ಅಭಿಮಾನ ಉಕ್ಕಿ ಭಾವೇಶ್ ಅವರ ಎದೆ ಬಿರಿಯುತ್ತಿತ್ತು. ಆಗ ಆ ಕ್ಷಣಗಳೂ ನೆನಪಾಗಿದ್ದವು. ಯಾತ್ರೆಯ ಕಷ್ಟಗಳಿಂದ ಸೋತು, ಪಯಣವನ್ನು ಅಲ್ಲಿಗೇ ನಿಲ್ಲಿಸಿ ಹಿಂತಿರುಗಿ ಓಡಿ ಬರಬೇಕು ಎಂದು ಅದೆಷ್ಟು ಬಾರಿ ಮನಸ್ಸಿಗೆ ಬಂದಿತ್ತು. ಆದರೆ ಹಾದಿಯ ಅಡೆತಡೆಗೆ ಸೋಲದೆ, ಅವುಗಳೆಲ್ಲವನ್ನು ದಾಟಿ ಸಫಲಗೊಂಡಿತ್ತು ಸೈಕಲ್ ಯಾತ್ರೆ.

ಪುರುಷೋತ್ತಮನ ವರ್ತನೆ ಆತನಿಗೆ ಆ ಕ್ಷಣದ ಲಾಭವನ್ನು ತಂದುಕೊಟ್ಟಿತ್ತು. ಆದರೆ ಆತನ ಇಂತಹ ವರ್ತನೆ ಭವಿಷ್ಯದ ಜೀವನದಲ್ಲಿ ಆತನನ್ನು ಬಹಳಷ್ಟು ಕಷ್ಟಕ್ಕೆ ಸಿಕ್ಕಿಸಲಿತ್ತು. ದಿನೇಶ್ ಇಂದಿಗೂ ಭಾವೇಶ್ ಅವರ ಆಪ್ತಸ್ನೇಹಿತರಾಗಿದ್ದಾರೆ. ಆ ಪ್ರವಾಸ ಭಾವೇಶ್ ಅವರಿಗೆ ಟೀಮ್ ಬಿಲ್ಡಿಂಗ್ ಬಗ್ಗೆ ಬಹಳಷ್ಟು ಕಲಿಸಿತ್ತು. ಪುರುಷೋತ್ತಮನಂತಹ ವ್ಯಕ್ತಿಗಳು ಬದುಕಿನಲ್ಲಿ ಸಿಕ್ಕೇ ಸಿಗುತ್ತಾರೆ. ಅವರಿಂದ ಪಲಾಯನ ಮಾಡಲು ಸಾಧ್ಯವಿಲ್ಲ. ಅಂತಹ ವ್ಯಕ್ತಿಗಳೊಡನೆ ವ್ಯವಹರಿಸುವುದನ್ನು, ಮುಂಜಾಗ್ರತೆಯ ಕ್ರಮ ವಹಿಸುವುದನ್ನು ಕಲಿತರು.

* * *

(ಸಶೇಷ)